ಅ) ರಾಜ್ಯದಲ್ಲಿ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗಳೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮತ್ತು ಶಾಲಾವಾರು ವಿವರ ನೀಡುವುದು)

ಆ) ಸದರಿ ಹುದ್ದೆಗಳನ್ನು ತುಂಬಲು ಸರ್ಕಾರವು ಕೈಗೊಂಡ ಕ್ರಮಗಳೇನು;

ಇ) ಪ್ರತಿಯೊಂದು ಕನ್ನಡ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸಲು ಸರ್ಕಾರದವರು ಯೋಚಿಸಿರುವರೇ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ರಾಜ್ಯ ಸಚಿವರು):–

ಅ) ಪ್ರಾಥಮಿಕ ಶಾಲೆಗಳಲ್ಲಿ 1035

ಜಿಲ್ಲಾವಾರು ಮಾಹಿತಿಯನ್ನು ತಾಲ್ಲೂಕುವಾರು ಹಾಗೂ ಶಾಲಾವಾರು ಮಾಹಿತಿಗಳನ್ನು ನಂತರ ಒದಗಿಸಲಾಗುವುದು.

ಪ್ರೌಢ ಶಾಲೆಗಳಲ್ಲಿ:

ಗ್ರೇಡ್ – 1 ದೈಹಿಕ ಶಿಕ್ಷಕರು	– 85
ಗ್ರೇಡ್ – 2 ದೈಹಿಕ ಶಿಕ್ಷಕರು	– 30
ಒಟ್ಟು	– 115

ಜಿಲ್ಲಾವಾರು ಮಾಹಿತಿಯನ್ನು ತಾಲ್ಲೂಕುವಾರು ಹಾಗೂ ಶಾಲಾವಾರು ಮಾಹಿತಿಗಳನ್ನು ನಂತರ ಒದಗಿಸಲಾಗುವುದು.

ಆ) ಪ್ರಾಥಮಿಕ ಶಾಲೆಗಳು:

1035 ಹುದ್ದೆಗಳ ಪೈಕಿ ಈಗಾಗಲೇ 79 ದೈಹಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನುಳಿದ 956 ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ವಿಶೇಷ ನೇಮಕಾತಿ ನಿಯಮಾವಳಿಗಳು ರೂಪಿತವಾಗಿದ್ದು ಈ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರದಲ್ಲಿಯೇ ಕ್ರಮ ತೆಗೆದುಕೊಳ್ಳಲಾಗುವುದು.

ಪ್ರೌಢಶಾಲೆಗಳು:

ಖಾಲಿ ಇರುವ 115 ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಪ್ರಾಥಮಿಕ: 1 ರಿಂದ 7 ತರಗತಿಗಳಿದ್ದು ಹಾಗೂ 7 ಸಾಮಾನ್ಯ ಶಿಕ್ಷಕರು ಇರುವಂತಹ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದು ಸಾಮಾನ್ಯ ಶಿಕ್ಷಕರ ಹುದ್ದೆಯನ್ನು ಒಂದು ದೈಹಿಕ ಶಿಕ್ಷಕ ಗ್ರೇಡ್ – 2 ಹುದ್ದೆಯನ್ನಾಗಿ ಪರಿವರ್ತಿಸಿದ್ದು ಆದರಂತೆ ಭರ್ತಿ ಮಾಡಲಾಗುತ್ತಿದೆ.

ಪ್ರೌಢಶಾಲೆ: ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಿಗೆ ದೈಹಿಕ ಶಿಕ್ಷಕರ ಹುದ್ದೆಯನ್ನು ಮಂಜೂರು ಮಾಡಲಾಗುತ್ತಿದೆ ಮತ್ತು ನೇಮಕಾತಿ ನಿಯಮದಂತೆ ಹುದ್ದೆಗಳನ್ನು ತುಂಬಲಾಗುತ್ತಿದೆ.

ಶ್ರೀ ಟಿ.ಆರ್. ಸತೀಶಚಂದ್ರ ಆಯೋಗದ ವರದಿ ಅನುಷ್ಠಾನ

225 (849) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಹಣಕಾಸು ಪರಿಸ್ಥಿತಿಯ ಬಗ್ಗೆ ಶಿಫಾರಸ್ಸು ಮಾಡಲು ಹಿಂದಿನ ಮುಖ್ಯ ಕಾರ್ಯದರ್ಶಿ ಶ್ರೀ ಟಿ.ಆರ್. ಸತೀಶ್‌ಚಂದ್ರ ಇವರ ನೇತೃತ್ವದಲ್ಲಿ ನೇಮಿಸಿದ ಆಯೋಗವು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವರೆ;

ಆ) ಹಾಗಿದ್ದಲ್ಲಿ ಸದರಿ ವರದಿಯನ್ನು ಸಲ್ಲಿಸಿರುವುದು ಯಾವಾಗ;

ಇ) ಈ ಆಯೋಗವು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಸರ್ಕಾರಕ್ಕೆ ಕೊಟ್ಟಿರುವ ಸಲಹೆಗಳಾವುವು;

ಈ) ಸರ್ಕಾರವು ಈ ಆಯೋಗದ ವರದಿಯನ್ನು ಒಪ್ಪಿಕೊಂಡಿರುವರೆ? ಈ ಆಯೋಗದ ಸಲಹೆಯನ್ನು ನೀಡಲು ಸಮಿತಿಯಲ್ಲಿದ್ದ ಸದಸ್ಯರಾರು;

ಉ) ಕೇರಳ ತಮಿಳುನಾಡು ಹಾಗೂ ಗುಜರಾತ್ ಸರ್ಕಾರಗಳು ತಮ್ಮ ಮಾರ್ಗದರ್ಶನಕ್ಕಾಗಿ ಈ ವರದಿಯನ್ನು ಕೇಳುತ್ತಿರುವ ಸಂಗತಿ ನಿಜವೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಹೌದು

ಆ) ದಿನಾಂಕ 31–5–1991

ಇ) ಈ ವರದಿಯ ಮೇಲೆ ಸರ್ಕಾರವು ಸಂಬಂಧಪಟ್ಟ ಇಲಾಖೆಗಳಿಂದ ಅಭಿಪ್ರಾಯಗಳನ್ನು ಕೋರಿರುತ್ತೆ. ಸದರಿ ಅಭಿಪ್ರಾಯಗಳು ಇನ್ನೂ ಕೆಲವು ಇಲಾಖೆಗಳಿಂದ ಬಂದಿಲ್ಲದಿರುವ ಕಾರಣದಿಂದ ಸರ್ಕಾರವು ಇನ್ನೂ ಯಾವ ನಿರ್ಣಯವನ್ನು ತೆಗೆದುಕೊಂಡಿರುವುದಿಲ್ಲ.

ಈ) ಈ ಆಯೋಗದ ಸಲಹೆಯನ್ನು ನೀಡಲು ಆ ಸಮಿತಿಯಲ್ಲಿದ್ದ ಇತರ ಸದಸ್ಯರು; ಶ್ರೀ ಸಿ.ಎಸ್. ಸಾಮಿನಾಥನ್, ಭಾರತ ಸರ್ಕಾರದ ನಿವೃತ್ತ ಕಾರ್ಯದರ್ಶಿ, ಗಣಿ ಇಲಾಖೆ ಹಾಗೂ ಡಾ।। ಜಿ. ತಿಮ್ಮಯ್ಯ, ಕರ್ನಾಟಕ ಸರ್ಕಾರದ ಆರ್ಥಿಕ ಸಲಹೆಗಾರರು. ಶ್ರೀ ಅರವಿಂದ ಜಾಧವ್, ಸಹಕಾರ್ಯದರ್ಶಿ, ಆರ್ಥಿಕ ಇಲಾಖೆ ಆಯೋಗದ ಸದಸ್ಯ ಕಾರ್ಯದರ್ಶಿಯಾಗಿದ್ದರು.

ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಕೆ.ಎಸ್.ಆರ್.ಟಿ.ಸಿ. ನೌಕರರಿಗೆ ಮಾಸಾಶನ

224 (851) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಸ್.ಆರ್.ಟಿ.ಸಿ. ನೌಕರರಿಗೆ ಮಾಸಾಶನ ಕೊಡಲಾಗುತ್ತಿದೆಯೆ;

ಆ) ಹಾಗಿಲ್ಲದಿದ್ದಲ್ಲಿ, ಸದರಿ ನೌಕರರಿಗೆ ಮಾಸಾಶನ ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಇ) ಬೇರೆ ರಾಜ್ಯದಲ್ಲಿ ಸಾರಿಗೆ ನೌಕರರಿಗೆ ಮಾಸಾಶನ ಕೊಡಲಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–